

## ಗೋವಿಂದನ ಮಗಳ ಎಂಟ್ರಿ

ನಟ ಗೋವಿಂದನ ಮಗಳು ಚಿತ್ರರಂಗಕ್ಕೆ ಪ್ರವೇಶಿಸುವ ಮಾತುಗಳು ಬಹಳ ಹಿಂದಿನಿಂದಲೂ ಕೇಳಿಬರುತ್ತಿದ್ದವು. ಕೊನೆಗೂ ಅದಕ್ಕೀಗ ಗಳಿಗೆ ಕೂಡಿಬಂದಿದೆ. 'ಸೆಕೆಂಡ್ ಹ್ಯಾಂಡ್ ಹಸ್ಬೆಂಡ್' ನರ್ಮದಾ ಅಹುಜಾಳ ಪಾದಾರ್ಪಣೆಯ ಚಿತ್ರ. ನರ್ಮದಾ ಮೊದಲು ಕಾಣಿಸಿಕೊಂಡಿದ್ದು 2007ರಲ್ಲಿ ಚಿತ್ರೋತ್ಸವ ಪ್ರಶಸ್ತಿ ಸಮಾರಂಭದ ನಿರೂಪಕಿಯಾಗಿ. ಆಗಿನಿಂದಲೇ ಆಕೆ ಚಿತ್ರರಂಗ ಪ್ರವೇಶಿಸುವ ಊಹಾಪೋಹಗಳು ಕೇಳಿಬರುತ್ತಿದ್ದವು. 'ದಬಾಂಗ್'ನಲ್ಲಿ ಸಲ್ಮಾನ್ ಖಾನ್ ಜತೆ ನಟಿಸುವ ಅವಕಾಶವನ್ನು ಈಕೆ ತಪ್ಪಿಸಿಕೊಂಡಿದ್ದಳಂತೆ.

ಅಭಿನಯ ಕೋರ್ಸ್‌ಗಳಲ್ಲಿ ನಟನೆ ಪಟ್ಟುಗಳನ್ನು ಕಲಿತಿರುವ ನರ್ಮದಾ, ಹತ್ತಾರು ಕಿರುಚಿತ್ರಗಳಲ್ಲಿ ನಟಿಸಿ ತಯಾರಿ ನಡೆಸಿದ್ದಾಳೆ. ನಟ ಗೋವಿಂದ 'ಅಹುಜಾ' ಸರ್‌ನೇಮ್‌ಅನ್ನು ಸೇರಿಸಿಕೊಳ್ಳದೆಯೇ ಗುರ್ತಿಸಿ-ಕೊಂಡಿದ್ದರೆ, ಮಗಳು ಮಾತ್ರ ಸರ್‌ನೇಮ್ ಜೊತೆಗೇ ಕಾಣಿಸಿಕೊಳ್ಳುತ್ತಿದ್ದಾಳೆ. ಈ ನಡುವೆ ಈಕೆ ಹೆಸರು ಬದಲಿಸಿಕೊಂಡಿರುವ ಸುದ್ದಿಯೂ ಇದೆ. ಈ ಚಿತ್ರದ ಮೂಲಕ ಆಕೆ ಟೀನಾ ಅಹುಜಾ ಆಗಿ ಪರಿಚಯ-ವಾಗಲಿದ್ದಾಳೆ ಎನ್ನಲಾಗುತ್ತಿದೆ.

ಅಪ್ಪನಂತೆಯೇ ಮಗಳು ಸಂಖ್ಯಾಶಾಸ್ತ್ರದ ಮೇಲೆ ಅತಿಯಾದ ನಂಬಿಕೆ ಉಳ್ಳಾಕೆ. ಹೀಗಾಗಿ ಒಮ್ಮೆ ಇಂಗ್ಲಿಷ್‌ನಲ್ಲಿ ತನ್ನ ಹೆಸರಿನ ಅಕ್ಷರಗಳನ್ನು ಬದಲಿಸಿ-ಕೊಂಡಿದ್ದ ನರ್ಮದಾ, ಈಗ ಹೆಸರನ್ನೇ ಬದಲಿಸಿಕೊಳ್ಳಲು ಮುಂದಾಗಿದ್ದಾಳೆ. 'ಸೆಕೆಂಡ್ ಹ್ಯಾಂಡ್ ಹಸ್ಬೆಂಡ್'ನಲ್ಲಿ ಗಾಯಕ ಜಿಪ್ಪಿ ಗ್ರೆವಲ್ ನಾಯಕ. ಧರ್ಮೇಂದ್ರ, ಗೋವಿಂದ ಮತ್ತು ಸಲ್ಮಾನ್ ಖಾನ್ ಕೂಡ ಈ ಚಿತ್ರದಲ್ಲಿ ಅತಿಥಿ ಪಾತ್ರಗಳಲ್ಲಿ ನಟಿಸಲಿದ್ದಾರೆ.

## ಪೂನಂ 'ನಗ್ನ' ಸತ್ಯ!

ಪೂನಂ ಪಾಂಡೆ ಗೊತ್ತಲ್ಲ? ಹಸಿಬಿಸಿ ಚಿತ್ರಗಳನ್ನು ಟ್ವಿಟ್ಟರ್‌ನಲ್ಲಿ ಹರಿಬಿಡುತ್ತಿದ್ದ ಈಕೆ ವಿವಾದ ಸೃಷ್ಟಿಸುವುದರಲ್ಲಿ ಸಿದ್ಧಹಸ್ತೆ. ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದರೆ ಬೆತ್ತಲಾಗುತ್ತೇನೆ ಎಂದು ಹೇಳಿಕೆ ನೀಡಿದ್ದಾಕೆ, ಗೆದ್ದಾಗ ಯಾರ ಕೈಗೂ ಸಿಕ್ಕಿರಲಿಲ್ಲ. ಹಾಗೆಯೇ 'ನಶಾ' ಚಿತ್ರದ ಮೂಲಕ ಬಿ-ಟೌನ್‌ಗೂ ಅಡಿ-ಯಿಟ್ಟಳು. ಚಿತ್ರದಲ್ಲಿ ಹಸಿಬಿಸಿಯಾಗಿ ಕಾಣಿಸಿಕೊಂಡರೂ ಪ್ರಯೋಜನ-ವಾಗಲಿಲ್ಲ. ಆಮೇಲೆ ಯಾಕೋ ಮಂಕಾದಂತೆ ಮರೆಗೆ ಸರಿದುಬಿಟ್ಟಳು.

ಆಕೆಯನ್ನು ಎಲ್ಲರೂ ಮರೆತೇಬಿಟ್ಟರು ಎನ್ನುತ್ತಿದ್ದಂತೆಯೇ ಮತ್ತೆ ಪ್ರತ್ಯಕ್ಷರಾಗಿದ್ದಾಳೆ. ಅದೂ 'ಸತ್ಯ'ದೊಂದಿಗೆ! 'ಅವಕಾಶಗಳು ತಾನಾಗಿಯೇ ಹುಡುಕಿಕೊಂಡು ಬರಲಿ ಎಂಬ ಕಾರಣಕ್ಕೇ ವಿವಾದಗಳನ್ನು ಸೃಷ್ಟಿಸುತ್ತಿದ್ದದ್ದು' ಎಂಬುದು ಪೂನಂ ಕೊನೆಗೂ ಒಪ್ಪಿಕೊಂಡಿರುವ ಸತ್ಯ. ಆಕೆಯೀಗ ವಿವಾದ-ಗಳಿಂದ ವಿಮುಖ. 'ಒಂದು ಕಾಲಘಟ್ಟಕ್ಕೆ ಜನ ನನ್ನತ್ತ ನೋಡುವಂತೆ ಮಾಡಬೇಕಾದ ಅಗತ್ಯವಿತ್ತು. ಅದಕ್ಕೇ ವಿವಾದಗಳನ್ನು ಹುಟ್ಟುಹಾಕಿದೆ. ಇದುವರೆಗೂ ನಾನು ಸಾಧಿಸಿದ್ದೆಲ್ಲವೂ ವಿವಾದಗಳ ಮೂಲಕವೇ. ಈಗ ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ವಿವಾದಗಳ ಹಂಗು ಎನಗಿಲ್ಲ' ಎಂದು ಹೇಳಿದ್ದಾಳೆ ಈ ಬೆಡಗಿ.

ಬಾಲಿವುಡ್ ಕದ ತಟ್ಟಿದ್ದ ಅವರನ್ನು ಈಗ ದಕ್ಷಿಣ ಭಾರತ ಆಹ್ವಾನಿಸಿದೆ. ತೆಲುಗಿನ 'ಮಾಲಿನಿ ಆ್ಯಂಡ್ ಕಂಪೆನಿ' ಚಿತ್ರದಲ್ಲಿ ಪೂನಂ ನಟಿಸುತ್ತಿದ್ದಾಳೆ. ಇದುವರೆಗೂ ಜನ ಬಿಕಿನಿಯಲ್ಲಿ ನೋಡಿದ್ದಾರೆ. ಆದರೆ ತನ್ನ ಪ್ರತಿಭೆಯ ಮುಖವನ್ನು ನೋಡಿಲ್ಲ. ಅದಿಲ್ಲಿ ಅನಾವರಣಗೊಳ್ಳುತ್ತದೆ ಎಂದು ಹೇಳಿ-ಕೊಂಡಿದ್ದಾಳೆ. ಉಗ್ರವಾದದ ಕಥನವುಳ್ಳ ಈ ಚಿತ್ರದಲ್ಲಿ ಅವಳದು ವಿಶೇಷ ಪಾತ್ರವಂತೆ. ಎಷ್ಟೇ ವಿವಾದಗಳನ್ನು ಸೃಷ್ಟಿಸಿದ್ದರೂ ಪ್ರತಿಭೆ ಇದ್ದರೆ ಮಾತ್ರ ನೆಲೆ ಸಿಗುವುದು. ಅದು ಈ ನಟಿಯ ವಿಷಯದಲ್ಲಿಯೂ ಸಾಬೀತಾಗುವುದೋ ನೋಡಬೇಕು.





## ಮಲೈಕಾ ಐಟಂ ಬ್ಯಾಟಿಂಗ್

ಬಾಲಿವುಡ್ ಸಿನಿಮಾಗಳು ಐಟಂ ಸಾಂಗ್ ಇಲ್ಲದಿದ್ದರೆ ಅಪೂರ್ಣ! ಈ ಐಟಂ ಸಾಂಗ್‌ಗಳೇ ಎಷ್ಟೋ ಸಿನಿಮಾಗಳ ಗೆಲುವಿಗೂ ಕಾರಣವಾಗಿವೆ. ಇತ್ತೀಚಿನ ಹಿಟ್ ಹಾಡುಗಳ ಪಟ್ಟಿ ತೆರೆದರೆ ಅದರಲ್ಲಿ ಐಟಂ ಸಾಂಗ್‌ಗಳೇ ಹೆಚ್ಚು. ಬಾಲಿವುಡ್‌ನ ಐಟಂ ಸಾಂಗ್ ವ್ಯಾಮೋಹಕ್ಕೆ ತೀವ್ರ ಟೀಕೆ, ವಿರೋಧಗಳೂ ವ್ಯಕ್ತವಾಗುತ್ತಲೇ ಇದೆ. 'ಐಟಂ ಸಾಂಗ್‌ಗಳ ಬಗ್ಗೆ ಚರ್ಚಿಸುವುದೇ ವಿಚಿತ್ರ ಎನಿಸುತ್ತದೆ. ಅಂತಿಮವಾಗಿ ಅದೊಂದು ಹಾಡು ಮತ್ತು ನೃತ್ಯದ ಪ್ರಕಾರವಷ್ಟೇ' ಎಂದಿದ್ದಾಳೆ ಐಟಂ ಪರಿಣತೆ ಮಲೈಕಾ ಅರೋರಾ. ರಾಜಕಾರಣಿಗಳು ಐಟಂ ಸಾಂಗ್ ಬಗ್ಗೆ ಮಾತನಾಡುವುದರ ವಿರುದ್ಧ ಮಲೈಕಾ ಕಿಡಿಕಾರಿದ್ದಾಳೆ. ಐಟಂ ಸಾಂಗ್ ಎಂದು ಪ್ರತ್ಯೇಕವಾಗಿ ನೋಡಿ, ವಿಶ್ಲೇಷಿಸುವ ರೀತಿಯೇ ಸರಿಯಲ್ಲ ಎನ್ನುವುದು ಆಕೆಯ ಅಭಿಪ್ರಾಯ. ಅದರ ಕುರಿತು ಗಂಭೀರ ಚರ್ಚೆ ನಡೆಸುವುದಂತೂ ತಮಾಷೆಯಂತೆ ಆಕೆಗೆ ಕಂಡಿದೆ. 'ಅದನ್ನು ಒಂದು ಸಾಮಾನ್ಯ ಮನರಂಜನಾ ಕ್ರಮ ಎಂದೇಕೆ ಸ್ವೀಕರಿಸುತ್ತಿಲ್ಲ? ಭಾರತೀಯ ಸಿನಿಮಾಗಳೆಂದರೆ ಅದು ಹಾಡು ಮತ್ತು ನೃತ್ಯವೇ' ಎಂದಿದ್ದಾಳೆ ಮಲೈಕಾ.

■ ಅಮಿ